ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ತಮ್ಮ ಮುಂದೆ ಭಗವಂತನು ಪ್ರತ್ಯಕ್ಷನಾಗಿ ಏನು ವರ ಬೇಕು ಎಂದರೆ?



ಸಾಧ್ಯವಾದರೆ ಪರಿಸರಮಾಲಿನ್ಯ ನಿರತರಿಗೆ ಶುದ್ಧಬುದ್ಧಿ ಕೊಡು ಎನ್ನುವೆ.

ವಿ. ಹಮೀದ್, ವಿಟ್ಲ
ರಾಜಕಾರಣಿಯ ಬೆನ್ನುನೋವಿಗೆ ಕಾರಣವೇನಿರಬಹುದು?
ಬೆನ್ನಿಗೆ ಚೂರಿ ಹಾಕುವ ಸ್ವಪಕ್ಷೀಯರೇ.

ಪಿ.ಜೆ. ರಾಘವೇಂದ್ರ, ಮೈಸೂರು
ಆರೋಪದಿಂದ ನೊಂದ ಮಂತ್ರಿ ಆತ್ಮಹತ್ಯೆಗೆ ಶರಣಾದಂತೆ ಕನಸು ಬಿತ್ತು. ಇದು ನನಸಾಗುವುದೆ?
ಊಹೂಂ. ಅಸಲಿಗೆ 'ಆರೋಪದಿಂದ ನೊಂದ ಮಂತ್ರಿ' ಎನ್ನುವುದೇ ಹುಚ್ಚುಕಲ್ಪನೆ.

ಆರ್. ಮಧುಸೂದನ್, ಹಾಸನ
ಗಡ್ಡ ವೈರಾಗ್ಯದ ಸಂಕೇತ. ಈಗಿನ ಹುಡುಗರು ಮದುವೆಯಲ್ಲೇ ಗಡ್ಡ ಬಿಡುವುದೇಕೆ?



ಸಂಸಾರದ 'ರೀತಿಗಡ್ಡ', 'ನೀತಿಗಡ್ಡ', 'ದಾರಿಗಡ್ಡ' ಬಂದರೆ ಎದುರಿಸಬಲ್ಲ ಮುಖವಿದು ಎಂದು ಸೂಚಿಸಲಂತೆ.

ಗಂಗಾದೇವಿ, ಬೆಂಗಳೂರು
ಇಲ್ಲೊಬ್ಬರು 'ರಾಮ್' ಎನ್ನುವ ವ್ಯಕ್ತಿ ಇಲ್ಲ ಎಂದು ವಾದಿಸುವರಲ್ಲ?
ಕಣ್ಣಿಗೆ ಕಾಣದುದು ಇಲ್ಲ ಎನ್ನುವುದು ನಾಸ್ತಿಕರ ಪ್ರಿಯವಾದ ಸ್ಲೋಗನ್ನು.

ಪಿ. ಶಂಕರಪ್ಪ, ಶಿವಮೊಗ್ಗ
ಕಳೆದ ಐದಾರು ವರ್ಷಗಳಿಂದ ಎಲ್ಲಾ ರಂಗದಲ್ಲೂ ಮೋಸ, ವಂಚನೆಗಳು ಹೆಚ್ಚುತ್ತಿರಲು ಕಾರಣ?
ಫೋನುಗಳನ್ನು ಸ್ಮಾರ್ಟ್ ಆಗಿ ಬಳಸುವವರು ಫೂಲ್ಸ್ ಆಗುತ್ತಿರುವುದು.

ದಿನೇಶ್, ಗುಡ್ಡದೂರು
ರಾಜಕಾರಣ ನಿಂತ ನೀರಲ್ಲ ಎನ್ನುತ್ತಾರೆ; ಹರಿಯುವ ನೀರಲ್ಲಿ ಯಾರು ರಾಜಕಾರಣ ಮಾಡುತ್ತಾರೆ?
'ಸ್ವಚ್ಛ ನದಿ ಅಭಿಯಾನ್' ಜನರು, ಕಾವೇರಿಯ ಕಾವೇರಿಸುವವರು.

ಕೆ.ವಿ. ಗೋವಿಂದಾಚಾರಿ, ಮೈಸೂರು
ಎಲ್ಲೆಡೆ ಕಾಣಿಸಿಕೊಳ್ಳುವ ಅಂಧರು ದೇವಸ್ಥಾನಗಳಿಗೆ ಬರುವುದಿಲ್ಲವೇಕೆ?
ಅವರು ವಿಗ್ರಹವಿಲ್ಲದೆಯೇ ದೇವರನ್ನು ಕಾಣಬಲ್ಲರಂತೆ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ಜೀವನವು ಒಂದು ಸಂಧ್ಯಾರಾಗವೆ?
ಕಾಫಿ ರಾಗದಿಂದ ಶುರುವಾಗಿ ಶುದ್ಧ ಸಾವೇರಿ ರಾಗದಿಂದ ಕೊನೆಗೊಳ್ಳುವ ದೀರ್ಘ ಕಚೇರಿ.

ಕೆ.ಎಂ. ವಿಭೂತಿ, ಹರಿಹರ
ಪ್ರಸ್ತುತ ರಾಜಕೀಯದಲ್ಲಿರುವವರು ನಾಗರಿಕರೋ, ಅನಾಗರಿಕರೋ?
ಕೆಲವು ನಿರ್ದಯ ಪ್ರಾಣಿಗಳನ್ನು ಹೀಗೆಲ್ಲ ವಿಂಗಡಿಸಲು ಸಾಧ್ಯವಿಲ್ಲ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ನಿಮಗೆ ರಾಜಕೀಯಕ್ಕಿಳಿಯುವ ದೂರಾಲೋಚನೆ ಎಂದಾದರೂ ಬಂದಿತ್ತೆ?
ಅಷ್ಟು ಹಣ, ಅಷ್ಟು ಗಣ, ಅಂತಹ ಗುಣ ಇರಲಿಲ್ಲವಾದ್ದರಿಂದ, ಬರಲಿಲ್ಲ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ನೂರು ಒಳ್ಳೆಯ ಕೆಲಸ ಮಾಡಿದರೂ ಒಂದು ಸಣ್ಣ ತಪ್ಪು ದೊಡ್ಡದಾಗಿ ಕಾಣುವುದಲ್ಲಾ?
ನೋಟ ನಿಯಮ. ಸುಂದರವಾದ ಮೊಗದಲ್ಲಿ ಎದ್ದುಕಾಣುವುದು ದೃಷ್ಟಿಬೊಟ್ಟೇ.

ಅ. ಮೃತ್ಯುಂಜಯ, ಪಾಂಡವಪುರ
ದೇಹವೇ ದೇಗುಲ. ಆದರೂ ದೇವರ ಹಂಬಲ ಏಕೆ?
ಸದಾಚಾರವೆಂಬ ವಿಗ್ರಹವಿಲ್ಲದೆ ಗರ್ಭಗುಡಿ ಖಾಲಿ ಇದೆಯಂತಲ್ಲ!

## ಬಹುಮಾನಿತ ಪ್ರಶ್ನೆ

ಬಿ. ಬಸವರಾಜ್, ಹರಿಹರ
ವಾರದ 'ಮೊದಲ ದಿನ' ಭಾನುವಾರವು 'ವೀಕೆಂಡ್'ಗೆ ಸೇರಿದ್ದೇಕೆ?
ಶನಿ ಹೆಗಲೇರಿದ್ದರಿಂದ ಸ್ಟ್ರಾಂಗ್ ಆಗಿದ್ದ ಭಾನು ವೀಕ್ ಆದನಂತೆ!

ಅಮರಯ್ಯಾ ಪತ್ರಿಮಠ, ಸುರಪುರ
ಸಾಮರಸ್ಯವಿಲ್ಲದ ಜೀವನ?
ಗಾಸಿಪ್ ಪ್ರಿಯರಿಗೆ ರಸದೌತಣ.

ಮಲ್ಲಿಕಾರ್ಜುನ, ಸುರಧೇನುಪುರ
ಗಗನಕ್ಕೆ ಏರುವ ಬೆಲೆಗಳಿಂದ ಗಗನಮಾಲಿನ್ಯ ಆಗಿರಬಹುದೆ?
ಆಗಿರುವುದರಿಂದಲೇ ಸೂರ್ಯನು ಕೋಪಗೊಂಡು ಶಾಖ ಏರಿರುವುದಂತೆ.

ಜಗದೀಶ ಬಿ. ಹೊಸೂರು, ಮೈಸೂರು
ಭಾರ ಹೊರುವ ಟಯರ್ ಮಾತನಾಡುವಂತಿದ್ದರೆ ಏನಾಗುತ್ತಿತ್ತು?



ಆಗಾಗ್ಗೆ ಕೋಪದ ನುಡಿಗಳು ಬರ್ಸ್ಟ್ ಔಟ್ ಆಗುತ್ತಿದ್ದವು.

ಎಸ್ಸೆನ್ಕೆ, ಕಡೂರು
ವೆಚ್ಚಕ್ಕೂ, ದುಂದುವೆಚ್ಚಕ್ಕೂ ವ್ಯತ್ಯಾಸವೇನು?
ಹಣವಿದ್ದು ಮಾಡಿದರೆ ವೆಚ್ಚ; ಹೆಣಗಾಡಿ ಮಾಡಿದರೆ ದುಂದುವೆಚ್ಚ.

ಬಿ. ಚಂದ್ರೇಗೌಡ, ಬೆಂಗಳೂರು
ಜೀವನಕ್ಕೂ, ಬದುಕಿಗೂ ಏನು ವ್ಯತ್ಯಾಸ?
ಜೀವನ ಸಾಗಿಸುವಂಥದ್ದು; ಬದುಕು ಕಟ್ಟಿಕೊಳ್ಳುವಂಥದ್ದು.

ಮಹಾವೀರ ಕಾಸರ, ಶಿವಮೊಗ್ಗ
ಮತದಾನಕ್ಕೆ ಪ್ರತಿಫಲ ಬಯಸುವುದು ಸರಿಯೆ?
'ಸರಿ' ಎಂದರು ಆತ್ಮಾಭಿಮಾನವನ್ನು ಮಾರಿಕೊಂಡ ಭಿಕ್ಷುಕಮತಿಗಳು.

■ ರಾಮ್